ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಹೊನ್ನಾವರ.

ಸಿಸಿ ನಂಃ 769/2021
ಪಿ ಡಬ್ಲುಃ 01
ಸಿ ಡಬ್ಲುಃ 01

| | |
|---|---|
| ಸಾಕ್ಷಿದಾರರ ಹೆಸರು | ರವಿ ರೊಡ್ರಿಗಸ್ |
| ತಂದೆಯ ಹೆಸರು | ರುಜಾರ್ |
| ವಯಸ್ಸು | 54 |
| ಉದ್ಯೋಗ | ಕೃಷಿ |
| ವಾಸ್ತವ್ಯ | ಕೊಡಾಣಿ |

ಸಾಕ್ಷಿಯನ್ನು ದಿನಾಂಕಃ 07-03-2023 ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ನನಗೆ ಆರೋಪಿತರ ಪರಿಚಯ ಇದೆ. ನನಗೆ 3 ನೇ ಆರೋಪಿಯ ಪರಿಚಯ ಇದೆ. ಅವರೆಲ್ಲರೂ ನಮ್ಮ ಊರಿನವರಾಗಿರುತ್ತಾರೆ. ದಿಃ 26.12.2019 ರಂದು ಕೊಡಾಣಿ ಗ್ರಾಮದ ಸರ್ವೆ ನಂ. 127 ಕ್ಕೆ ಅಕ್ರಮ ರೇತಿ ಸಾಗಾಟದ ಕುರಿತು ಗಣಿ ಮತ್ತು ಭೂ ಇಲಾಖೆ ಅಧಿಕಾರಿಗಳು ಮದ್ಯಾಹ್ನ 3.30 ಕ್ಕೆ ಬಂದಿದ್ದು ಸ್ಥಳ ತನಿಖೆ ಮಾಡಿ ಸದ್ರಿ ಸರ್ವೆ ನಂಬರಿನ ಮಾಲ್ಕಿದಾರರನ್ನು ಕರೆದುಕೊಂಡು ಬರುವಂತೆ ನನಗೆ ತಿಳಿಸಿರುತ್ತಾರೆ. ಸ್ಥಳದಿಂದ 2-3 ಅಡಿಯಷ್ಟು ದೂರ ನಾನು ಬೈಕಿನಲ್ಲಿ ಹೋಗುತ್ತಿರುವಾಗ ಆರೋಪಿತರು ಘಟನಾ ಸ್ಥಳದ ಹತ್ತಿರದಲ್ಲಿರುವ ಮನಯಿಂದ ನಮ್ಮ ಹತ್ತಿರ ಬಂದು ನನ್ನ ಬೈಕನ್ನು ಅಡ್ಡಗಟ್ಟಿ ನನ್ನನ್ನು ಹಿಡಿದು ಎಳೆದು ಮುಖ, ಎದೆ, ಬೆನ್ನಿನ ಮೇಲೆ ಹೊಡೆದು ನನ್ನ ಎದೆಯ ಮೇಲೆ ಪರಚಿದ್ದು ಆ ಸಮಯದಲ್ಲಿ ಚಾಸಾ 4 ಮತ್ತು 5 ರವರು ಬಂದು ಗಲಾಟೆ ತಪ್ಪಿಸಿರುತ್ತಾರೆ. ಸದ್ರಿ ಘಟನೆಯನ್ನು ಸ್ಥಳಕ್ಕೆ ಬಂದಂತಹ ಅಧಿಕಾರಿಗಳು ಮತ್ತು ಗ್ರಾಮ ಅಧಿಕಾರಿಗಳು ನೋಡಿರುತ್ತಾರೆ. ಅವರು ಸ್ಥಳಕ್ಕೆ ಬಂದು ಗಲಾಟೆ ತಪ್ಪಿಸಲು ಪ್ರಯತ್ನಪಟ್ಟಿರುತ್ತಾರೆ. ನಂತರ ಆರೋಪಿತರು ಈ ಹಿಂದೆ 2015 ರಲ್ಲಿ ರಸ್ತೆ ನಿರ್ಮಾಣದ ಸಮಯದಲ್ಲಿ ಆದ ಘಟನೆಯಲ್ಲಿ ನೀನು ತಪ್ಪಿಸಿಕೊಂಡಿದ್ದೀಯಾ ಈ ಘಟನೆಯ ಬಗ್ಗೆ ಪೋಲಿಸರಿಗೆ ಮಾಹಿತಿ ನೀಡಿದರೆ ನನ್ನನ್ನು ಕೊಲ್ಲುತ್ತೇನೆ ಎಂದು ಸೂಳೆ ಮಗನೇ, ಬೋಳಿ ಮಗನೇ ಎಂದು ಬೈದಿರುತ್ತಾರೆ. ನಂತರ ದಿಃ 27.12.2019 ರಂದು ಸಂಜೆ 5.30 ರ ಸಮಯಕ್ಕೆ ನಾನು ಆರೋಪಿತರ ಮನೆ ಮುಂಭಾಗದಿಂದ ಹೋಗುತ್ತಿರುವಾಗ ನನ್ನನ್ನು ಅಕ್ರಮವಾಗಿ ಪ್ರತಿಬಂಧಿಸಿ ರಂಡೆಪುತ್ತಾ ತುಕ್ ಮಾತ್ರ ಸೋಡ್ನಾ ಮೈನ್ಸ ಡಿಪಾರ್ಟಮೆಂಟಾಚೆ ಕರ್ನ ಗೆಲ್ಲರೆ ಪಂಚನಾಮೆ ಸಾಕ್ಷಿ ಸಹಿ ಗಾತ್ಲಾ ತುಕಾ ಸೋಡ್ನಾ ಖಾಂಡುನ ಉಡೈತಾ ಎಂದು ನನಗೆ ಬೆದರಿಕೆ ಹಾಕಿರುತ್ತಾರೆ. ನಂತರ ದಿಃ 30.12.2019 ರಂದು ಹೊನ್ನಾವರ ಪೋಲಿಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತೇನೆ. ನಂತರ ಪೋಲಿಸರು ದಿಃ 24.01.2020 ರಂದು ನಾನು ಕೊಟ್ಟಂತಹ ದೂರನ್ನು ಎನ್.ಸಿ ಪ್ರಕರಣ ಎಂದು ದಾಖಲಿಸಿ ಹಿಂಬರಹವನ್ನು ನೀಡಿರುತ್ತಾರೆ. ದಿಃ 08.02.2020 ರಂದು ನಾನು ಎಸ್ ಪಿ ಕಾರವಾರ ರವರಿಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ಸದ್ರಿ ದೂರನ್ನು

ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಸದ್ರಿ ದಾಖಲೆಯನ್ನು ನಿಪಿ. 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ. 1 ಎ ಎಂದು ಗುರುತಿಸಲಾಯಿತು.

ದಿಃ 30.06.2020 ರಂದು ಪೋಲಿಸರು ಘಟನಾ ಸ್ಥಳಕ್ಕೆ ಬಂದಿದ್ದು ಆ ಸಮಯದಲ್ಲಿ ಚಾಸಾ 2 ಮತ್ತು 3 ರವರನ್ನು ಕರೆದುಕೊಂಡು ಬಂದಿದ್ದು ಅವರಿಗೆ ನಾನು ಘಟನೆ ನಡೆದ ಬಗ್ಗೆ ಮಾಹಿತಿ ನೀಡಿದ್ದು ಸ್ಥಳ ತನಿಖೆ ಮಾಡಿ ಅಕ್ಷಾಂಶ ರೇಖಾಂಶವನ್ನು ತಿಳಿಸಿರುತ್ತೇನೆ. ಸ್ಥಳದಲ್ಲಿ ಪೋಲಿಸರು ಬರವಣಿಗೆ ಮಾಡಿ ಪೋಟೋ ತೆಗೆದಿರುತ್ತಾರೆ. ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಸದ್ರಿ ದಾಖಲೆಯನ್ನು ನಿಪಿ. 2 ಎಂದು , ಸಾಕ್ಷಿಯ ಸಹಿಯನ್ನು ನಿಪಿ. 2 ಎ ಎಂದು, ಪೋಟೋವನ್ನು ನಿಪಿ. 3 ಎಂದು ಗುರುತಿಸಲಾಯಿತು.

ಪೋಲಿಸರು ನನ್ನನ್ನು ಪುನಃ ವಿಚಾರಣೆ ಮಾಡಿದ್ದಾರೋ ಇಲ್ಲವೋ ನನಗೆ ನೆನಪಿಲ್ಲ. ಸಾಕ್ಷಿ ಮುಂದುವರಿದು ಮಾಡಿರಬಹುದು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ಘಟನೆಯ ಬಗ್ಗೆ ಸಿಡಿ ಮತ್ತು ಪೋಟೋವನ್ನು ನ್ಯಾಯಾಲಯ ಅನುಮತಿ ನೀಡಿದರೆ ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತೇನೆ.

( ಈ ಸಮಯದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಂಬಂಧಿತ ಅರ್ಜಿ ನೀಡುತ್ತೇನೆ ಎಂದು ಹೇಳಿದ ಕಾರಣ ಪಾಟೀ ಸವಾಲನ್ನು ಮುಂದುಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

ಪ್ರ ದ ನ್ಯಾದಂ ಹೊನ್ನಾವರ.